ಈ ತಾಲ್ಲೂಕಿನಲ್ಲಿ ಇದೇ ಅವಧಿಯಲ್ಲಿ ಗ್ರಾಮೀಣ ವಿದ್ಯುದ್ದೀಕರಣ ನೀರಾವರಿ ಪಂಪುಸೆಟ್ಟುಗಳಿಗೆ ಒದಗಿಸುವಲ್ಲಿನ ಪ್ರಗತಿ ಕೆಳಕಂಡಂತಿದೆ.

		ಗುರಿ	ಸಾಧನೆ
೧.	ಗ್ರಾಮಗಳ ವಿದ್ಯುದೀಕರಣ	೨೮	೧೧
೨.	ಉಪ ಗ್ರಾಮಗಳ ವಿದ್ಯುದ್ದೀಕರಣ	—	೨
೩.	ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವುದು	೯೯	೧೬೬

ಮೇಲಿನ ಅಂಕಿ ಅಂಶಗಳನ್ನು ಪರಿಶೀಲಿಸಿದಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ಗುರಿ ಮೀರಿ ಪ್ರಗತಿ ಸಾಧಿಸಲಾಗಿದೆ (೬೭ ಹೆಚ್ಚು ಪಂಪು ಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಗಿದೆ) ಉಪ ಗ್ರಾಮಗಳ ವಿದ್ಯುದೀಕರಣಕ್ಕೆ ಗುರಿ ಹೊಂದಿಲ್ಲದಿದ್ದರೂ ೨ ಉಪ ಗ್ರಾಮಗಳ ವಿದ್ಯುದ್ದೀಕರಣವಾಗಿದೆ. ಗ್ರಾಮಗಳ ವಿದ್ಯುದ್ದೀಕರಣದಲ್ಲಿ ಕೊಂತೆ ಕಂಡುಬಂದಿದೆ. ತಾಲ್ಲೂಕಿಗೆ ಸಾಮಾನುಗಳನ್ನು ಗುರಿಗನುಗುಣವಾಗಿ ಸರಬರಾಜು ಮಾಡಲಾಗುತ್ತದೆ. ಗುರಿ ಮೀರಿ ಹೆಚ್ಚು ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡಿರುವುದರಿಂದ ಈ ಬಾಬ್ತಿಗೆ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಸಾಮಾನುಗಳು ಉಪಯೋಗವಾಗಿ ಗ್ರಾಮೀಣ ವಿದ್ಯುದ್ದೀಕರಣಕ್ಕೆ ತೊಂದರೆಯಾಗಿದೆ. ಈ ಕ್ಷೇತ್ರದಲ್ಲಿ ಪ್ರಗತಿ ಕಾಂಕ್ಷಿತವಾಗಿದೆ.

ಮಂಡಲಗಳಿಗೆ ಈ ಕಾರ್ಯಗಳಿಗೆ ದೊರೆಯುವ ಹಣ ಮಿತವಾಗಿದ್ದು, ಇದಕ್ಕನುಗುಣವಾಗಿ ಗುರಿ ನಿಗದಿಮಾಡಿ ಸಾಮಾನುಗಳನ್ನು ಸರಬರಾಜು ಮಾಡಲಾಗುತ್ತದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ೩ -೩-೬೭ರ ವೇಳೆಗೆ ೩೬ ಗ್ರಾಮಗಳ ವಿದ್ಯುದ್ದೀಕರಣವಾಗಬೇಕಾಗಿದ್ದು. ಈ ಎಲ್ಲಾ ಗ್ರಾಮಗಳನ್ನು ಈ ಸಾಲಿನಲ್ಲಿ ವಿದ್ಯುದ್ದೀಕರಣಗೊಳಿಸಿ ಶೇಕಡ ನೂರರಷ್ಟು ರೆವಿನ್ಯೂ ಗ್ರಾಮಗಳ ವಿದ್ಯುದ್ದೀಕರಣ ಸಾಧಿಸಲಾಗುತ್ತದೆ.

ಉಪ ಗ್ರಾಮಗಳ ವಿದ್ಯುದ್ದೀಕರಣವನ್ನು ೧೯೬೮-೬೯ ರಿಂದ ತೀವ್ರಗೊಳಿಸಲಾಗುತ್ತದೆ. ಈ ತಾಲ್ಲೂಕಿಗೆ ವಾರ್ಷಿಕ ಗುರಿ ಸಾಧಿಸಲು ಬೇಕಾಗುವ ಸಾಮಾನುಗಳನ್ನು ಒದಗಿಸಲಾಗುತ್ತದೆ.

ರಾಜ್ಯದ ಶಾಲಾ ಕಾಲೇಜುಗಳಲ್ಲಿ ಶಿಕ್ಷಕ ಉಪನ್ಯಾಸಕರುಗಳ ಕೆಲಸವನ್ನು ಖಾಯಂ ಮಾಡುವುದು ಮತ್ತು ವೇತನ ಶ್ರೇಣಿಯನ್ನು ಹೆಚ್ಚಿಸುವುದು

ಶ್ರೀಮತಿ ಮನೋರಮ ಮಧ್ವರಾಜ್.—ಕಳೆದ ನಾಲ್ಕು ಶೈಕ್ಷಣಿಕ ವರ್ಷಗಳಿಂದ ರಾಜ್ಯದ ಶಾಲಾಕಾಲೇಜುಗಳಲ್ಲಿ ಶಿಕ್ಷಕ ಉಪನ್ಯಾಸಕರುಗಳಾಗಿ ಕೆಲಸ ಮಾಡುತ್ತಿದ್ದಾಗ್ಯೂ ಅವರನ್ನು ಖಾಯಂ ಮಾಡಿರುವುದಿಲ್ಲ. ಇವರನ್ನು ಆಯ್ಕೆ ಮಾಡಿದಾಗ ರೋಸ್ಟರ್ ಪದ್ಧತಿ ಅನುಸರಿಸಲಾಗಿದೆ. ರಾಜ್ಯದ ಶಾಲಾ ಕಾಲೇಜುಗಳಲ್ಲಿ ಶಿಕ್ಷಕ-ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ. ೧೯೬೫-೬೬ ರಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂಗೊಳಿಸಿದ ರೀತಿಯಲ್ಲಿ ಅವರನ್ನೂ ಖಾಯಂಗೊಳಿಸಬೇಕೆಂದು ಸರಕಾರವನ್ನು ಆವರು ಕೋರಿದ್ದಾಗ್ಯೂ ಈ ವರೆಗೂ ಯಾವ ಕ್ರಮವನ್ನೂ ಕೈಕೊಳ್ಳದಿರುವುದರಿಂದಲೂ, ಖಾಯಂ ಶಿಕ್ಷಕ ಉಪನ್ಯಾಸಕರಿಗೆ ಕೊಡುತ್ತಿರುವ ವೇತನ ಶ್ರೇಣಿಯನ್ನು ಇವರಿಗೆ ಕೊಡುವುದರಿಂದಲೂ ಈ ಬಗ್ಗೆ ರಾಜ್ಯದ ಗುತ್ತಿಗೆ ಶಿಕ್ಷಕ-ಉಪನ್ಯಾಸಕರ ಜಂಟಿ ಕ್ರಿಯಾ ಸಮಿತಿ ಸರಕಾರಕ್ಕೆ ಮಾನವಿ ಸಲ್ಲಿಸಿ ಮುನ್ನೆಚ್ಚರಿಕೆ ನೀಡಿರುವುದರಿಂದ ಯಾವುದೇ ರೀತಿಯ ಅಹಿತಕರ ಘಟನೆ ಸಂಭವಿಸುವ ಮೊದಲೇ ಗುತ್ತಿಗೆ ಶಿಕ್ಷಕ-ಉಪನ್ಯಾಸಕರನ್ನು ಖಾಯಂ ಮಾಡಿ ಹೊಸ ವೇತನ ಶ್ರೇಣಿಯನ್ನು ನಿಡುವ ಬಗ್ಗೆ ಸರಕಾರದವರು ಈ ಸದನಕ್ಕೆ ಹೇಳಿಕೆ ನೀಡಬೇಕೆಂದು ಸರಕಾರದವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ನೀಡುತ್ತೇನೆ. ಹಾಗೂ ಸದಸ್ಯರ ಕಳಕಳಿಯನ್ನು ಸಂಬಂಧಪಟ್ಟವರಿಗೆ ತಿಳಿಸುತ್ತೇನೆ.

ಪ್ರಾಥಮಿಕ ಶಾಲೆಗಳಿಗೆ ಹೊಸದಾಗಿ ಶಿಕ್ಷಕ ಶಿಕ್ಷಕಿಯರನ್ನು ಆಯ್ಕೆಮಾಡುವಾಗ ವಯೋಮಿತಿ ದಾಟಿದವರಿಗೆ ಆದ್ಯತೆ ನೀಡುವುದು

ಶ್ರೀ ಎನ್. ಎಚ್. ಗೌಡ.—ಅಧ್ಯಕ್ಷರೇ, ಮಾನವನ ಬದುಕಿನಲ್ಲಿ ಬಡತನವೊಂದು ಶಾಪ ಬಡತನಕ್ಕೆ ಮೂಲ ಕಾರಣ ನಿರುದ್ಯೋಗ. ಇಂದು ನಾಡಿನಲ್ಲಿ ನಿರುದ್ಯೋಗ ಸಮಸ್ಯೆ ಭೂತಕಾರವಾಗಿ ಬೆಳೆದು ತನ್ನ ನಾಲಿಗೆಯನ್ನು ಎಲ್ಲೆಲ್ಲಿಯೂ ಚಾಚಿದೆ. ಕಲಿಯದವರು ಹೇಗೋ ಹಾಗೆ ಕಲಿತ

ವರೂ ಕೂಡ ಈ ನಿರುದ್ಯೋಗ ಜ್ವಾಲೆಯ ನಾಲಿಗೆಯಿಂದ ಪಾರಾಗುವುದು ಸಾಧ್ಯವಾಗಿಲ್ಲ. ನಾಡಿನ ಸಾವಿರ ಸಾವಿರ ಜನ ಕಲಿತ ಯುವಕ ಯುವತಿಯರು ಜೋಲುಮೊರೆಹಾಕಿ, ಹತಾಶ ಭಾವನೆಯಿಂದ ಸಾಗುತ್ತಿರುವ ದೃಶ್ಯ ಎಲ್ಲೆಲ್ಲಿಯೂ ಕಂಡುಬರುತ್ತಿರುವುದು ವಾಸ್ತವಿಕ ಸಂಗತಿ. ಇಂತ ಕಲಿತ ನಿರುದ್ಯೋಗಿಗಳಲ್ಲಿ ಎಸ್.ಎಸ್.ಎಲ್.ಸಿ. ಯನ್ನು ಪಾಸುಮಾಡಿ ಪ್ರಾಥಮಿಕ ಶಿಕ್ಷಕರ ತರಬೇತಿಯನ್ನು ಪಡೆದು ಉದ್ಯೋಗವಿಲ್ಲದೆ ಅಲೆದಾಡುವವರ ಸಂಖ್ಯೆ ವರ್ಷ ವರ್ಷವೂ ಹೆಚ್ಚುತ್ತಿದೆ. ಅವರಲ್ಲಿ ಅನೇಕರು ೨೯-೩೦ ವರ್ಷ ವಯೋಮಿತಿಯನ್ನು ಮೀರಿದವರು, ಅಂಥವರನ್ನು ನಿರಾಶೆಯ ಕಾರ್ಮೋಡ ದಟ್ಟವಾಗಿ ಕವಿದಿದೆ. ಅವರ ಚೇತನ ಕುಂದುತ್ತಿದೆ. ಪ್ರತಿಭೆ ಕಮರುತ್ತಿದೆ. ಅವರ ಚೈತನ್ಯ ಸಂಪೂರ್ಣವಾಗಿ ಹೋಗುವ ಮುನ್ನ ಅಂತಹವರಿಗೊಂದು ದಾರಿ ತೋರಿಸಬೇಕಾದುದು ಆವಶ್ಯಕ ಕರ್ತವ್ಯ. ಆದ್ದರಿಂದ ಪ್ರಾಥಮಿಕ ಶಾಲೆಗಳಿಗೆ ಹೊಸದಾಗಿ ಶಿಕ್ಷಕ ಶಿಕ್ಷಕಿಯರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ೨೯-೩೦ ವರ್ಷ ವಯೋಮಿತಿ ದಾಟಿದವರಿಗೆ ಪ್ರಥಮ ಪ್ರಾಶಸ್ತ್ಯವನ್ನು ನೀಡಿ ಅವರ ಬಾಳಿಗೊಂದು ಬೆಳಕು ತೋರಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಪೂರ್ವಕವಾಗಿ ವಿನಂತಿಸುತ್ತೇನೆ.

ಶ್ರೀ ಎ. ರಘುಪತಿ.—ಅಧ್ಯಕ್ಷರೇ, ಈ ವಿಷಯವಾಗಿ ಸರ್ಕಾರದ ನೀತಿಯೇ ಇದೆ. ಎಂದರೆ ಯಾರಿಗೆ ವಯೋಮಿತಿ ಜಾಸ್ತಿ ಆಗಿರುತ್ತದೋ ಅವರಿಗೆ ಅಧ್ಯತೆ ಕೊಡಬೇಕು ಎಂದು ಅದೇ ರೀತಿಯ ಸರ್ಕಾರಿ ಆಜ್ಞೆ ಕೂಡ ಆಗಿದೆ, ಆಧ್ಯತೆ ಮೇಲೆ ಅವರಿಗೆ ಪ್ರಾಶಸ್ತ್ಯ ಸಿಗುತ್ತದೆ.

ಮಂಗಳೂರಿನ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವನ್ನು ದುರಸ್ತಿಮಾಡುವುದು

ಶ್ರೀ ಬ್ಲೇಸಿಯಸ್ ಎಂ. ಡಿಸೌಜ.—ಅಧ್ಯಕ್ಷರೇ, ಮಂಗಳೂರಿನ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ ತುಂಬಾ ದುಸ್ತಿತಿಯಲ್ಲಿದ್ದು ಅಲ್ಲಲ್ಲಿ ಹಳ್ಳಗಳಿದ್ದು ಕೊಚ್ಚೆ ನೀರಿನಿಂದ ಕೂಡಿರುತ್ತದೆ. ಇದರಿಂದ ಬಸ್ಸುಗಳು ಓಡಾಡುವುದಕ್ಕೂ ನಿಲ್ಲಿಸುವುದಕ್ಕೂ ತೊಂದರೆಯಾಗಿದ್ದು ಪ್ರಯಾಣಿಕರಿಗೆ ಮತ್ತಷ್ಟು ಹೆಚ್ಚಿನ ತೊಂದರೆಯಾಗಿದೆ. ಪ್ರಯಾಣಿಕರು ಕೊಚ್ಚೆ ನೀರಿನಲ್ಲೇ ಓಡಾಡಬೇಕಾಗಿದೆ. ಇದರ ದುರಸ್ತಿಗಾಗಿ ಅಂದಾಜೊಂದನ್ನು ಇಲಾಖೆಯವರು ಈಗಾಗಲೇ ತಯಾರಿಸಿ ಕಳುಹಿಸಿರುವುದಾಗಿ ತಿಳಿದು ಬಂದಿದೆ. ಆದರೆ ಈವರೆಗೂ ಯಾವ ಕ್ರಮವನ್ನೂ ಕೈಗೆ ತಳ್ಳದೇ ಇರುವುದರಿಂದ ಸದರಿ ಅಂದಾಜಿಗೆ ಮಂಜೂರಾತಿ ದೊರಕಿಸಿ ಪ್ರಯಾಣಿಕರಿಗಾಗುತ್ತಿರುವ ತೊಂದರೆಯನ್ನು ತಪ್ಪಿಸಲು ಕ್ರಮಕೈಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಸಾರಿಗೆ ಸಚಿವರು).—ಮಂಗಳೂರಿನಲ್ಲಿ ರಾಜ್ಯ ರಸ್ತೆ ಸಾರಿಗೆಸಂಸ್ಥೆಯ ಬಸ್ ನಿಲ್ದಾಣದಲ್ಲಿ ಆವರಣದಲ್ಲಿ ಉಂಟಾಗಿರುವ ಹಳ್ಳಗಳನ್ನು ದುರಸ್ತಿಪಡಿಸುವಂತೆ ಕಾರ್ಯನಿರ್ವಾಹಕ ಅಭಿಯಂತರು, ಹುಬ್ಬಳ್ಳಿ—ಇವರಿಗೆ ಈಗಾಗಲೇ ಆದೇಶ ನೀಡಲಾಗಿದೆ. ಮಂಗಳೂರು ಹೆಚ್ಚಿಗೆ ಮಳೆ ಬೀಳುವ ಪ್ರದೇಶವಾದ್ದರಿಂದ, ಬಸ್ ನಿಲ್ದಾಣದ ಆವರಣಕ್ಕೆ ಡಾಂಬರು ಬದಲು ಕಾಂಕ್ರೀಟ್ ಹಾಕುವ ಯೋಜನೆ ಇದೆ. ಆದರೆ ಆರ್ಥಿಕ ಮುಗ್ಗಟ್ಟಿನಿಂದಾಗಿ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಈ ಕಾಮಗಾರಿ ಕೆಲಸಕ್ಕೆ ಹಣವನ್ನು ಒದಗಿಸಿರುವುದಿಲ್ಲ. ಆದ್ದರಿಂದ ಸಾರಿಗೆ ನಿಗಮದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಆವರಣಕ್ಕೆ ಕಾಂಕ್ರೀಟ್ ಹಾಕಲು ಅಧ್ಯತೆಯ ಮೇರೆಗೆ ಕ್ರಮ ತೆಗೆದುಕೊಳ್ಳಲಾಗುವುದು.

ಎಸ್.ಎಸ್.ಎಲ್.ಸಿ. ಯಾಗಿ ಟಿ.ಸಿ.ಹೆಚ್. ಮಾಡಿಕೊಂಡಿದ್ದವರಿಗೆ ಶಿಕ್ಷಕರ ಹುದ್ದೆಯನ್ನು ನೀಡುವುದು

ಶ್ರೀ ಎಂ. ಎಲ್. ಉಸ್ತಾದ್.—ಅಧ್ಯಕ್ಷರೇ, ಎಸ್. ಎಸ್. ಎಲ್. ಸಿ. ಯಾಗಿ ಟಿ.ಸಿ.ಹೆಚ್. ಮಾಡಿಕೊಂಡಿದ್ದು ಶಿಕ್ಷಕರ ಹುದ್ದೆಗೆ ಸೇರುವವರಿಗೆ ೪೩ ವರ್ಷಗಳ ವಯೋಮಿತಿ ಇದ್ದು ೧೯೮೧ನೇ ಇಸವಿಯ ಪ್ರಾಥಮಿಕ ಶಾಲೆಗಳ ಸಹಾಯಕ ದರ್ಜೆಯ ನಿಯಮಗಳಲ್ಲಿ ಅನುಕೂಲ ಕಲ್ಪಿಸಲಾಗಿದ್ದಿತ್ತು. ಇತ್ತೀಚೆಗೆ ಈ ವಯೋಮಿತಿಯನ್ನು ೩೫ ವರ್ಷಗಳಿಗೆ ಇಳಿಸಿದ್ದು ಈವರೆಗೆ ತಾತ್ಕಾಲಿಕವಾಗಿ ಬೇರೆ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದು ಈಗ ಕೆಲಸವಿಲ್ಲದಿರುವ ಟಿ. ಸಿ. ಹೆಚ್. ಮಾಡಿಕೊಂಡಿರುವವರು ಬಿಜಾಪುರ ಜಿಲ್ಲೆಯಲ್ಲಿ ಕೇವಲ ೫೫ ಮಂದಿ ಇದ್ದು ಅವರಲ್ಲಿ ಮೂವರು ಎಸ್. ಎಸ್. ಎಲ್. ಸಿ. ಮಾಡಿರುತ್ತಾರೆ. ಸರ್ವಶ್ರೀ ಮಹಮ್ಮದ್ ಸಯೆದ್ ಹುಸೇನ್ ಇನಾಂದಾರ್, ಮುಕ್ತಾರ್ ಅಹಮದ್ ಎಚ್. ಮುಲ್ಲಾ, ಕಾಸಿಂಸಾಬ್ ಮಿಸ್ಕಿನ್‌ಷಾ ಮಕಾನ್‌ದಾರ್, ಕಲಂ ಹುಸೇನಿ ಮುರ್ಷದ್‌ಫೀರ್ ಜಗೀರ್‌ದಾರ್ ಮತ್ತು ಮಹಮದ್ ಸಿರಾಜ್‌ನಬಿಸಾಹೇಬ್ ಮುಲ್ಲಾ, ಇವರುಗಳ ವಯೋಮಿತಿ ಕಡಿಮೆ